# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 259 |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 10-12-2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು<br>ನಗರ ಯೋಜನೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗುಲಬರ್ಗಾ, ಹುಬ್ಬಳ್ಳಿ, ಧಾರವಾಡ, ಬೆಳಗಾಂ ವಿಭಾಗಗಳಲ್ಲಿ 24*7 ಯೋಜನೆ ಮುಖಾಂತರ ಮನೆ ಮನೆಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಯೋಜನೆ ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಿ ಯಾವಾಗ ಕಾರ್ಯ ಆರಂಭಿಸಲಾಯಿತು;</td><td>ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ – (ಕೆಯುಡಬ್ಲ್ಯೂಎಸ್‌ಎಂ.ಪಿ) ಯಡಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ|| ಎಲ್ & ಟಿ ಲಿಮಿಟೆಡ್ ರವರಿಗೆ ಗುತ್ತಿಗೆಯನ್ನು ನೀಡಲಾಗಿದೆ.<br><br>ಯೋಜನೆಯ ಪ್ರಾರಂಭದ ದಿನಾಂಕ ಹಾಗೂ ಗುತ್ತಿಗೆ ಮೊತ್ತದ ವಿವರಗಳು ಕೆಳಕಂಡಂತಿದೆ:<br><br>
<table>
<tr><th>ಕ್ರ. ಸಂ</th><th>ನಗರ</th><th>ಕಾಮಗಾರಿ ಪ್ರಾರಂಭಿಸಿದ ದಿನಾಂಕ</th><th>ಬಂಡವಾಳ ವೆಚ್ಚ (ಕೆಪೆಕ್ಸ್)</th><th>ಕಾರ್ಯಾಚರಣೆ ಮತ್ತು ನಿರ್ವಹಣೆ (ಓಪೆಕ್ಸ್)</th><th>ಒಟ್ಟು</th></tr>
<tr><td>1</td><td>ಹುಬ್ಬಳ್ಳಿ-ಧಾರವಾಡ</td><td>12.06.2020</td><td>931.02</td><td>275.95</td><td>1206.97</td></tr>
<tr><td>2</td><td>ಕಲಬುರಗಿ</td><td>10.06.2020</td><td>604.95</td><td>232.48</td><td>837.43</td></tr>
<tr><td>3</td><td>ಬೆಳಗಾವಿ</td><td>15.06.2020</td><td>571.35</td><td>232.78</td><td>804.13</td></tr>
<tr><td colspan="3">ಒಟ್ಟು</td><td>2107.32</td><td>741.21</td><td>2848.53</td></tr>
</table>
</td></tr>
<tr><td>ಆ)</td><td>ಈ ಯೋಜನೆ ಪೂರ್ಣ ಕಾರ್ಯ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು;<br>ಪೂರ್ಣಗೊಳ್ಳದಿರಲು ಕಾರಣವೇನು;<br>ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆದ ಹಾನಿ ಎಷ್ಟು ; ನಿಗದಿ ಪಡಿಸಿದ ಅವಧಿಯಲ್ಲಿ ಕಾರ್ಯ ಮುಗಿಸದೇ ಇರುವ ಕಂಪನಿಗೆ ದಂಡ ವಿಧಿಸಲಾಗಿದೆ ; ಈಗಲೂ ಸಹ ಈ ಯೋಜನೆ ಪೂರ್ಣವಾಗದೆ ಕಲುಬುರಗಿ ನಗರಕ್ಕೆ ಸಮರ್ಪಕ ನೀರಿನ ಸಮಸ್ಯೆ ಉಂಟಾಗಿದ್ದು ಸಾರ್ವಜನಿಕರು ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗುವುದಿಲ್ಲವೆ ;</td><td>ಸದರಿ 24X7 ಕುಡಿಯುವ ನೀರಿನ ಯೋಜನೆಯನ್ನು ವಿನ್ಯಾಸ-ನಿರ್ಮಾಣ-ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದು, ವಿವರ ಕೆಳಕಂಡಂತಿದೆ :<br>• ಯೋಜನೆಯ ವಿನ್ಯಾಸ : 6 ತಿಂಗಳು<br>• ಕಾಮಗಾರಿಗಳ ನಿರ್ಮಾಣ ಅವಧಿ : 4 ವರ್ಷ 6 ತಿಂಗಳು<br>• ನಿರ್ಮಾಣ ಸಮಯದ ಕಾರ್ಯಾಚರಣೆ ಮತ್ತು ನಿರ್ವಹಣೆ : 5 ವರ್ಷ<br>• ಸುಸ್ಥಿರ ಅವಧಿ ಕಾರ್ಯಾಚರಣೆ ಮತ್ತು ನಿರ್ವಹಣೆ : 7 ವರ್ಷ<br>• ಒಟ್ಟು 12 ವರ್ಷಗಳು<br>• ಕರಾರಿನಂತೆ ನಿರ್ಮಾಣ ಕಾಮಗಾರಿಯು ಜೂನ್-2025ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ.<br>• ಕಾಮಗಾರಿ ಪ್ರಾರಂಭದ ಅವಧಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಪಿಡುಗಿನಿಂದ ವಿನ್ಯಾಸ ಮತ್ತು ನಿರ್ಮಾಣ ಕಾಮಗಾರಿಯ ಪ್ರಾರಂಭವು ವಿಳಂಬವಾಗಿರುತ್ತದೆ.</td></tr>
</table>

| | | |
|---|---|---|
| | | • ಹಾಲಿ ಕುಡಿಯುವ ನೀರು ಸರಬರಾಜು ನಿರ್ವಹಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ಮೆ\|\| ಎಲ್ & ಟಿ ಲಿಮಿಟೆಡ್ ರವರಡಿಯಲ್ಲಿ ಕೆಲಸ ನಿರ್ವಹಿಸಲು ಒಪ್ಪದ ಕಾರಣ ವಿಳಂಬವಾಗಿರುತ್ತದೆ.<br>• ಕಲಬುರಗಿ ನಗರದ ಬೆಣ್ಣೆತೊರ ಜಲಾಶಯದಿಂದ ಕುಡಿಯುವ ನೀರಿನ ಹಂಚಿಕೆ ವಿಳಂಬವಾದ ಕಾರಣ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಿರುತ್ತದೆ.<br>• ವಿವಿಧ ಇಲಾಖೆಗಳಿಂದ ಕೊಳವೆ ಮಾರ್ಗ ಅಳವಡಿಸಲು ಅನುಮತಿ ದೊರೆಯುವಲ್ಲಿ ವಿಳಂಬವಾಗಿರುತ್ತದೆ.<br>• ಕಲಬುರಗಿ ನಗರಕ್ಕೆ ನೀರು ಪೂರೈಸಲು ಉದ್ದೇಶಿಸಿರುವ ಬೆಣ್ಣೆತೊರ ಜಲಾಶಯದಲ್ಲಿ ಮೂಲಸ್ಥಾವರ ನಿರ್ಮಿಸಲು ಅನುಮತಿ ನೀಡುವಲ್ಲಿ ವಿಳಂಬವಾಗಿರುತ್ತದೆ.<br>• ಮೂಲ ಸ್ಥಾವರ ಹೊರತುಪಡಿಸಿ ಇತರೆ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದೆ.<br>• ಆದಾಗ್ಯೂ ಗುತ್ತಿಗೆದಾರರ ವಿಳಂಬಕ್ಕೆ ಕರಾರಿನನ್ವಯ ನಿಯಮಾನುಸಾರ ದಂಡ ವಿಧಿಸಲಾಗಿದೆ.<br>• ಹುಬ್ಬಳ್ಳಿ-ಧಾರವಾಡ ಯೋಜನೆಗೆ ರೂ.20.21 ಕೋಟಿ, ಬೆಳಗಾವಿ ಯೋಜನೆಗೆ ರೂ.13.18 ಕೋಟಿಗಳು ಹಾಗೂ ಕಲಬುರಗಿ ಯೋಜನೆಗೆ ರೂ.19.48 ಕೋಟಿಗಳ ದಂಡವನ್ನು ವಸೂಲಿ ಮಾಡಲಾಗಿದೆ.<br>• ಕಲಬುರಗಿ ನಗರಕ್ಕೆ ಪ್ರಸ್ತುತ ಸರಡಗಿ ಗ್ರಾಮದ ಹತ್ತಿರ ಭೀಮಾ ನದಿ ಮೂಲದಿಂದ, ಕುರಿಕೋಟಾ ಹತ್ತಿರವಿರುವ ಬೆಣ್ಣೆತೊರಾ ನದಿ ಮೂಲದಿಂದ ಪ್ರತಿದಿನ 80 ಎಂಎಲ್‌ಡಿ ಕಚ್ಚಾ ನೀರನ್ನು ಜಲಶುದ್ಧೀಕರಣ ಘಟಕದಲ್ಲಿ ಶುದ್ಧೀಕರಿಸಿ ನಗರದ ಬಳಕೆದಾರರಿಗೆ ಪೂರೈಸಲಾಗುತ್ತಿದೆ.<br>• ಕಲಬುರಗಿ ನಗರಕ್ಕೆ ಬೆಣ್ಣೆತೊರಾ ಜಲಾಶಯದಿಂದ ಕಾಮಗಾರಿ ಪೂರ್ಣಗೊಂಡ ನಂತರ 58.77 ಎಂ.ಎಲ್.ಡಿ ಶುದ್ಧ ಕುಡಿಯುವ ನೀರು ಹೆಚ್ಚುವರಿಯಾಗಿ ಪೂರೈಸಬಹುದಾಗಿದೆ. |
| ಇ) | ಈ ಯೋಜನೆಯ ನಗರಾಭಿವೃದ್ಧಿ ಇಲಾಖೆ ನೇರ ಹೊಣೆ ಯಲ್ಲವೆ ; ಈ ವಿಷಯ ಕುರಿತು ಸದನದಲ್ಲಿ ಸರ್ಕಾರವು ಭರವಸೆ ನೀಡಿದ್ದರೂ ಎಲ್ ಅಂಡ್ ಟಿ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸದಿರಲು ಕಾರಣವೇನು ; ಕಲಬುರಗಿ ನಗರಕ್ಕೆ ಮನೆ ಮನೆಗೆ ಸಮರ್ಪಕ ನೀರಿನ ವ್ಯವಸ್ಥೆ ಯಾವಾಗ ಕಲ್ಪಿಸಲಾಗುವುದು ? | ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ನಗರಾಭಿವೃದ್ಧಿ ಇಲಾಖೆಯಿಂದ ಗುತ್ತಿಗೆದಾರರೊಂದಿಗೆ ಕಾಮಗಾರಿ ಪೂರ್ಣಗೊಳಿಸಲು ಆಗಿಂದಾಗ್ಯೆ ಸಭೆ ನಡೆಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.<br>ಗುತ್ತಿಗೆದಾರರಾದ ಮೆ\|\| ಎಲ್&ಟಿ ರವರಿಗೆ ಕರಾರಿನ ನಿಯಮಾನುಸಾರ ಈಗಾಗಲೇ ವಿಳಂಬವಾಗಿರುವುದಕ್ಕೆ ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಯಿಂದ ನೋಟೀಸ್‌ಗಳನ್ನು ನೀಡಲಾಗಿದೆ ಹಾಗೂ ಗುತ್ತಿಗೆ ಅವಧಿಯು ಇನ್ನೂ ಮುಗಿದಿರುವುದಿಲ್ಲವಾದ್ದರಿಂದ, ಕರಾರಿನ ನಿಯಮಾನುಸಾರ ಪ್ರಗತಿ ಸಾಧಿಸದೇ ಇರುವುದಕ್ಕೂ ಸಹ ನೋಟೀಸ್ ಜಾರಿಗೊಳಿಸಲಾಗಿದೆ. |

| | | |
|---|---|---|
| | | ಗುತ್ತಿಗೆದಾರರು ಕಾಮಗಾರಿಯನ್ನು ಕರಾರಿನಲ್ಲಿ ನಿಗಧಿಪಡಿಸಿರುವ ಅವಧಿಯೊಳಗೆ ಪೂರ್ಣಗೊಳಿಸುವಲ್ಲಿ ವಿಫಲವಾದಲ್ಲಿ ಕರಾರಿನಂತೆ ಕ್ರಮವಹಿಸಲಾಗುವುದು.<br><br>ಈಗಾಗಲೇ ಕಲಬುರಗಿ ನಗರದ ಐವಾನ್-ಷಾಹಿ ಸುತ್ತಮುತ್ತಲಿನ ಪ್ರದೇಶಗಳಿಗೆ ವಿತರಣಾ ಜಾಲವನ್ನು ಅಳವಡಿಸಿ 254 ಮನೆಗಳಿಗೆ ನಳ ಸಂಪರ್ಕವನ್ನು ನೀಡಲಾಗಿದೆ. ಈ ಹಿಂದೆ ಮೂರು ದಿನಕ್ಕೊಮ್ಮೆ ಕುಡಿಯುವ ನೀರು ಪೂರೈಸಲಾಗುತ್ತಿತ್ತು. ಪ್ರಸ್ತುತ ಸದರಿ ಬಡಾವಣೆಗೆ ಪ್ರತಿದಿನ 8 ರಿಂದ 10 ಘಂಟೆ ನೀರು ಪೂರೈಸಲಾಗುತ್ತಿದೆ.<br><br>ಕಲಬುರಗಿ ನಗರದ ಕೊತ್ತನೂರು ಡಿ ಬಡಾವಣೆಗೆ ವಿತರಣಾ ಜಾಲವನ್ನು ಅಳವಡಿಸಿ, ಸುಮಾರು 325 ಮನೆಗಳಿಗೆ ನಳ ಸಂಪರ್ಕವನ್ನು ನೀಡಲಾಗಿದೆ. ಸದ್ಯದಲ್ಲೇ ಈ ಪ್ರದೇಶಕ್ಕೂ ಹೊಸ ವಿತರಣಾ ಜಾಲದಿಂದ ನೀರನ್ನು ಪೂರೈಸಲು ಕ್ರಮವಹಿಸಲಾಗುತ್ತದೆ.<br><br>ಕಲಬುರಗಿ ನಗರದ ಇತರೆ ಪ್ರದೇಶಗಳಿಗೆ ಇದೇ ರೀತಿ ಹಂತ ಹಂತವಾಗಿ ವಿತರಣಾ ಜಾಲವನ್ನು ಅಳವಡಿಸಿ, ಮನೆಗಳಿಗೆ ನಳ ಸಂಪರ್ಕವನ್ನು ಕಲ್ಪಿಸಿ ಕುಡಿಯುವ ನೀರನ್ನು ಪೂರೈಸಲು ಎಲ್ಲಾ ಅಗತ್ಯ ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 182 ಪಿಆರ್‌ಜೆ 2024

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು